ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 8-13
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸಾ.ರಾ ಅಬೂಬ್ಬಕರ್ ರವರ ಕಥೆಗಳಲ್ಲಿ ಪುರುಷ ಪಾತ್ರಗಳ ವಿನ್ಯಾಸ

ಮೀನಾಕ್ಷಿ ಎನ್. ಪಿ[1] ಮತ್ತು ಡಾ. ಯಲ್ಲಮ್ಮ ಕೆ[2]

[1]ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಹಾಗೂ ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಆರ್ಟ್ಸ್, ಸೈನ್ಸ್ ಅಂಡ್ ಕಾಮರ್ಸ್ ಕಾಲೇಜು, ಬೆಂಗಳೂರು

[2]ಸಹಾಯಕ ಪ್ರಾಧ್ಯಾಪಕರು, ಜಿವಿಪಿಪಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ, ಹಗರಿಬೊಮ್ಮನಹಳ್ಳಿ, ವಿಜಯನಗರ

**Abstract:**

*ಸಾ.ರಾ. ಅಬೂಬ್ಬಕರ್ ಕನ್ನಡ ಸಾಹಿತ್ಯದ ಪ್ರಮುಖ ಕಥೆಗಾರ್ತಿಯರಲ್ಲಿ ಒಬ್ಬರಾಗಿದ್ದು, ಅವರ ಕಥೆಗಳು ಸಮಾಜದ ವಾಸ್ತವಿಕತೆ ಮತ್ತು ಮಾನವ ಸಂಬಂಧಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಅವರ ಕಥೆಗಳಲ್ಲಿ ಪುರುಷ ಪಾತ್ರಗಳು ಕುಟುಂಬ, ಸಮಾಜ ಹಾಗೂ ಧಾರ್ಮಿಕ ವ್ಯವಸ್ಥೆಗಳ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳುತ್ತವೆ. ಈ ಪಾತ್ರಗಳ ಮೂಲಕ ಪುರುಷ ಮನೋವೃತ್ತಿ, ಅಧಿಕಾರ ಪ್ರಜ್ಞೆ, ಜವಾಬ್ದಾರಿ ಮತ್ತು ಮೌಲ್ಯಗಳ ವಿವಿಧ ಆಯಾಮಗಳು ವ್ಯಕ್ತವಾಗುತ್ತವೆ. ಕೆಲ ಪಾತ್ರಗಳು ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿನಿಧಿಸಿದರೆ, ಇನ್ನು ಕೆಲವು ಸಾಮಾಜಿಕ ಬದಲಾವಣೆಗಳಿಗೆ ಸ್ಪಂದಿಸುವವರಾಗಿವೆ. ಮಹಿಳಾ ಪಾತ್ರಗಳೊಂದಿಗೆ ಪುರುಷ ಪಾತ್ರಗಳ ಸಂಬಂಧವು ಕಥೆಗಳ ಪ್ರಮುಖ ಅಂಶವಾಗಿದೆ. ಈ ಅಧ್ಯಯನವು ಸಾ.ರಾ. ಅಬೂಬ್ಬಕರ್ ಅವರ ಕಥೆಗಳಲ್ಲಿನ ಪುರುಷ ಪಾತ್ರಗಳ ವಿನ್ಯಾಸ ಮತ್ತು ಅವುಗಳ ಸಾಹಿತ್ಯಿಕ ಮಹತ್ವವನ್ನು ವಿಶ್ಲೇಷಿಸುತ್ತದೆ.*

**Keywords:** *ಸಾ.ರಾ. ಅಬೂಬ್ಬಕರ್, ಪುರುಷ ಪಾತ್ರಗಳು, ಕಥಾ ಸಾಹಿತ್ಯ, ಸಾಮಾಜಿಕ ವಾಸ್ತವಿಕತೆ, ಪಾತ್ರ ವಿನ್ಯಾಸ*

## ಪೀಠಿಕೆ

ಕನ್ನಡ ಕಥಾ ಸಾಹಿತ್ಯದಲ್ಲಿ ಸಾ.ರಾ. ಅಬೂಬ್ಬಕರ್ ಅವರು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಅವರು ತಮ್ಮ ಕಥೆಗಳ ಮೂಲಕ ಮುಸ್ಲಿಂ ಸಮುದಾಯದ ಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಅವರ ಕಥೆಗಳು ಕೇವಲ ಮಹಿಳಾ ಅನುಭವಗಳ ಸುತ್ತಮುತ್ತ ಸೀಮಿತವಾಗಿರದೆ, ಪುರುಷ ಪಾತ್ರಗಳ ಜೀವನ, ಮನೋಭಾವನೆಗಳು ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಸಹ ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತವೆ.

ಸಾ.ರಾ. ಅಬೂಬ್ಬಕರ್ ಅವರ ಕಥೆಗಳಲ್ಲಿನ ಪುರುಷ ಪಾತ್ರಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ತಂದೆ, ಪತಿ, ಸಹೋದರ, ಧಾರ್ಮಿಕ ಮುಖಂಡ ಹಾಗೂ ಸಮಾಜದ ಪ್ರತಿನಿಧಿಗಳಾಗಿ ಅವರು ಕಥಾ ವಸ್ತುವಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಪಾತ್ರಗಳು ಕೆಲವೊಮ್ಮೆ ಸಂಪ್ರದಾಯ ಮತ್ತು ಅಧಿಕಾರದ ಪ್ರತೀಕಗಳಾಗಿದ್ದರೆ, ಮತ್ತೊಮ್ಮೆ ಮಾನವೀಯ ಮೌಲ್ಯಗಳು, ಕರುಣೆ ಮತ್ತು ಪ್ರಗತಿಪರ ಚಿಂತನೆಗಳನ್ನು ಪ್ರತಿನಿಧಿಸುತ್ತವೆ. ಅವರ ಪಾತ್ರಗಳ ಮೂಲಕ ಸಮಾಜದಲ್ಲಿರುವ ಲಿಂಗ ಸಂಬಂಧಗಳು,

***Please cite this article as:*** ಮೀನಾಕ್ಷಿ, ಎನ್.ಪಿ ಮತ್ತು ಯಲ್ಲಮ್ಮ ಕೆ (2026). ಸಾ.ರಾ ಅಬೂಬ್ಬಕರ್ ರವರ ಕಥೆಗಳಲ್ಲಿ ಪುರುಷ ಪಾತ್ರಗಳ ವಿನ್ಯಾಸ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 8–13

ಅಧಿಕಾರದ ರಚನೆಗಳು ಹಾಗೂ ಕುಟುಂಬದ ಒಳಹೊರಗಿನ ಸಂಘರ್ಷಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ.

ಹೀಗಾಗಿ ಸಾ.ರಾ. ಅಬೂಬ್ಕರ್ ಅವರ ಕಥೆಗಳಲ್ಲಿನ ಪುರುಷ ಪಾತ್ರಗಳ ವಿನ್ಯಾಸವನ್ನು ಅಧ್ಯಯನ ಮಾಡುವುದರಿಂದ ಅವರ ಕಥಾ ಸಾಹಿತ್ಯದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನಸಿಕ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಲೇಖನವು ಅವರ ಕಥೆಗಳಲ್ಲಿನ ಪುರುಷ ಪಾತ್ರಗಳ ಸ್ವರೂಪ, ಪಾತ್ರ ನಿರ್ವಹಣೆ ಮತ್ತು ಕಥಾವಸ್ತುವಿನಲ್ಲಿ ಅವುಗಳ ಮಹತ್ವವನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ.

**ಸಾ.ರಾ. ಅಬೂಬಕರ್ ಕಥೆಗಳಲ್ಲಿ ಪುರುಷ ಪಾತ್ರಗಳು**

ಸಾ.ರಾ. ಅಬೂಬಕರ್ ಮುಸ್ಲಿಂ ಸಮುದಾಯದ ಹಾಗೂ ಇತರ ಸಮುದಾಯದ ಹೆಣ್ಣಿನ ನೋವನ್ನು ಜಗತ್ತಿಗೆ ತೋರಿಸಿದ ಲೇಖಕಿ. ಆದರೆ ಅವರ ಕಥೆಗಳನ್ನು ಗಮನಿಸಿದರೆ ಪುರುಷ ಪಾತ್ರಗಳ ಚಿತ್ರಣವೂ ಅಷ್ಟೇ ಸೂಕ್ಷ್ಮ ಮತ್ತು ಮಹತ್ವದ್ದಾಗಿದೆ. ಅವರು ಪುರುಷರನ್ನು 'ಖಳನಾಯಕ' ಎಂದು ಸರಳವಾಗಿ ತೋರಿಸುವುದಿಲ್ಲ. ಪಿತೃಪ್ರಧಾನ ವ್ಯವಸ್ಥೆಯ ಪ್ರತಿನಿಧಿಗಳು ಇವರು ಧರ್ಮ, ಸಂಪ್ರದಾಯ, ಸಮಾಜದ ಹೆಸರಲ್ಲಿ ಹೆಣ್ಣನ್ನು ನಿಯಂತ್ರಿಸುವವರು. "ಅಸಹಾಯಕ ಆದರೆ ಮೂಕಪ್ರೇಕ್ಷಕ ಪುರುಷರು" ಇವರಿಗೆ ಹೆಣ್ಣಿನ ಮೇಲೆ ಅನ್ಯಾಯ ಆಗುತ್ತಿದೆ ಎಂದು ಗೊತ್ತಿರುತ್ತದೆ. ಮನಸ್ಸಿನಲ್ಲಿ ಕನಿಕರ ಇರುತ್ತದೆ. ಆದರೆ ಸಮಾಜಕ್ಕೆ, ಮನೆಯ ಹಿರಿಯರಿಗೆ ಹೆದರಿ ಬಾಯಿ ಮುಚ್ಚಿಕೊಳ್ಳುತ್ತಾರೆ. ಸುಧಾರಣಾವಾದಿ, ಪ್ರಗತಿಪರ ಪುರುಷರು ಇವರು ತುಂಬಾ ವಿರಳ. ಆದರೆ ಅಬೂಬಕರ್ ಇವರಿಗೂ ಜಾಗ ಕೊಟ್ಟಿದ್ದಾರೆ. ಓದಿಕೊಂಡು, ಹೆಣ್ಣನ್ನು ಸಮಾನಳಾಗಿ ಕಾಣುವ, ಅವಳ ವಿದ್ಯಾಭ್ಯಾಸಕ್ಕೆ ಬೆಂಬಲಿಸುವ ಪಾತ್ರಗಳು ಇದ್ದಾರೆ. ಧರ್ಮದ ಹೆಸರಲ್ಲಿ ಶೋಷಿಸುವ ಮೌಲ್ವಿಗಳು, ಖಾಜಿಗಳು ತಲಾಖ್, ಬಹುಪತ್ನಿತ್ವದಂತಹ ವಿಷಯಗಳಲ್ಲಿ ಹೆಣ್ಣಿನ ಪರವಾಗಿ ನಿಲ್ಲಬೇಕಾದ ಧಾರ್ಮಿಕ ಮುಖಂಡರು ಹೇಗೆ ಪುರುಷ ಪ್ರಧಾನತೆಯನ್ನು ಎತ್ತಿ ಹಿಡಿಯುತ್ತಾರೆ ಎಂಬುದನ್ನು ಸಾ.ರಾ. ಖಾರವಾಗಿ ಚಿತ್ರಿಸಿದ್ದಾರೆ. ಇವರಿಗೆ ಧರ್ಮಕ್ಕಿಂತ ಪುರುಷಾಹಂಕಾರವೇ ಮುಖ್ಯ. ಖಳನಾಯಕರಲ್ಲ, ವ್ಯವಸ್ಥೆಯ ಬಲಿಪಶುಗಳು: ಅವರು ಪುರುಷರನ್ನು ದ್ವೇಷಿಸುವುದಿಲ್ಲ. "ಇವನು ಯಾಕೆ ಹೀಗಾದ?" ಎಂದು ಪ್ರಶ್ನಿಸುತ್ತಾರೆ. ಪುರುಷನೂ ಕೂಡ ಪಿತೃಪ್ರಧಾನ ವ್ಯವಸ್ಥೆಯ ಒಂದು ಬಲಿಪಶು. ಅವನಿಗೂ ಅಳಬಾರದು, ಗಟ್ಟಿಯಾಗಿರಬೇಕು ಎಂಬ ಒತ್ತಡವಿದೆ. ಒಬ್ಬನೇ ಪುರುಷನಲ್ಲಿ ಒಳ್ಳೆಯದು ಮತ್ತು ಕೆಟ್ಟದು ಎರಡನ್ನೂ ತೋರಿಸುತ್ತಾರೆ. ಹೊರಗೆ ಅಹಂಕಾರ ತೋರಿಸುವ ಗಂಡಸು ಮನೆಯಲ್ಲಿ ಅಮ್ಮನ ಮುಂದೆ ಮಗುವಾಗಬಹುದು. "ಗಂಡಸು ಅಂದರೆ ಹೀಗೇ ಇರಬೇಕಾ?" ಎಂದು ಓದುಗನನ್ನು ಯೋಚಿಸುವಂತೆ ಮಾಡುತ್ತಾರೆ. ಪುರುಷತ್ವದ ವ್ಯಾಖ್ಯಾನವನ್ನೇ ಪ್ರಶ್ನಿಸುತ್ತಾರೆ. ಸಾ.ರಾ. ಅಬೂಬಕರ್ ಅವರ ಕಥೆಗಳಲ್ಲಿ ಪುರುಷ ಪಾತ್ರ "ವ್ಯಕ್ತಿಯಲ್ಲ, ಒಂದು ವ್ಯವಸ್ಥೆಯ ಮುಖ". ಆ ವ್ಯವಸ್ಥೆಯನ್ನು ಪ್ರಶ್ನಿಸಿ, ಅದನ್ನು ಬದಲಾಯಿಸುವ ಶಕ್ತಿ ಪುರುಷನಿಗೂ ಇದೆ ಎಂದು ಅವರು ನಂಬುತ್ತಾರೆ. ಆದ್ದರಿಂದ ಅವರ ಪುರುಷ ಪಾತ್ರಗಳು ಕೇವಲ ಹೆಣ್ಣನ್ನು ಹಿಂಸಿಸುವವರಲ್ಲ, ತಾವೇ ಸೃಷ್ಟಿಸಿಕೊಂಡ ಬಂಧನದಲ್ಲಿ ನರಳುವವರೂ ಹೌದು. ಪಿತೃಪ್ರಧಾನತೆಯ ಸೆರೆಯಾಳು, ಆದರೆ ಆ ಸೆರೆಯಿಂದ ಹೊರಬರುವ ಕೀಲಿಕೈ ಅವನ ಕೈಯಲ್ಲೇ ಇದೆ.

**ಸಾ.ರಾ. ಅವರ ಕಥೆಗಳು**

***ಸರಿದ ಕಾರ್ಮೋಡ***

ಜಬೀನಾ ಮತ್ತು ನವಾಬ್ ಗಂಡ–ಹೆಂಡತಿಯರು. ನವಾಬ್ ಏಳುಮಂದಿ ಅಣ್ಣ ತಮ್ಮಂದಿರು ಹಾಗೂ ಮತ್ತವರ ಸಂಸಾರಗಳಿಂದ ತುಂಬಿದ ಕೂಡು ಕುಟುಂಬ. ಆ ಕುಟುಂಬಕ್ಕೆಲ್ಲ ಹಿರಿಯಣ್ಣನೇ ಯಜಮಾನ "ದಾದ"ಎಂದರೆ ಎಲ್ಲರಿಗೂ ಎಲ್ಲಿಲ್ಲದ

ಪ್ರೀತಿ, ಭಯ, ಗೌರವದ ಭಾವನೆ. ಜಬೀನಾ ಅತಿಸುಂದರವಾದ ದೇಹದ ಮೈಕಟ್ಟು ಹಾಗೂ ಎಲ್ಲರರನ್ನು ಆಕರ್ಷಸಿಸುವ ಮುಗ್ಧತೆ ಮತ್ತು ನಯವಾದ, ದಟ್ಟನೆಯ ತಲೆಕೂದಲನ್ನು ಹೊಂದಿರುವಳು. ಅವಳ ಸೌಂದರ್ಯದಿಂದಲೆ ಹಲವು ಶತ್ರುಗಳು ಹುಟ್ಟುವಂತಿದ್ದವು. ಜೊತೆಗೆ ಅತಿಯಾದ ಮಮತೆ, ಕಾಳಜಿ, ಮನಸಾರೆ ಪ್ರೀತಿಸುವ ಗಂಡ ನವಾಬ್ ಇಬ್ಬರ ನಡುವಿನ ದಾಪಂತ್ಯ ಜೀವನ ಎಲ್ಲರನ್ನು ಕಣ್ಣು ಕುಕ್ಕಿಸುವಂತದ್ದವು. ಜೋಡಿ ಪ್ರಣಯ ಪಕ್ಷಿಗಳಂತೆ ಒಬ್ಬರನೋಬ್ಬರು ಅರಿತ್ತಿದ್ದರು ಹಾಗೂ ಒಂದಾಗಿದ್ದರು. ಇದು ಅವಳ ವಾರಗತ್ತಿಯರಿಗೆ ಅಸೂಯೆ ಉಂಟಾಗುವಂತೆ ಮಾಡಿತು. ದಾದನ ಮೊಮ್ಮಗನನ್ನು ನೋಡಲು ಹೋದಾಗ ಅವಳನ್ನು ನೋಡಿದ ದಾದನ ಅಳಿಯ ಎಲ್ಲರಿಗೂ ಕೊಡವಂತೆ ಅವಳಿಗೂ ಹೂ ಕೊಡುತ್ತಾನೆ ಆದರೆ ಕೊಡುವಾಗ ಆತನ ಮನಸ್ಸು ಅವಳಲ್ಲಿ ಹರಿದದ್ದನ್ನು ಗಮನಿಸಿದ ವಾರಗಿತ್ತಿಯರು ನಾನ ವಿಧದಲ್ಲಿ ತೊಂದರೆಯನ್ನು ದಾದನ ಮೂಲಕ ಕೊಡಿಸುತ್ತಾರೆ. ಅಣ್ಣನ ಮಾತಿಗೆ ತಿರುಗೇಟು ನೀಡದ ನವಾಬ್ ಹಲವು ಹಿಂಸೆಗೆ ಗುರಿಪಡುತ್ತಾನೆ. ಜಬೀನಾ ಬಾಣಂತನಕ್ಕೇ ತವರು ಮನೆಗೆ ಹೋದಾಗ ನವಾಬ್‌ನಿಗೆ ಎರಡನೇಯ ಮದುವೆ ಮಾಡಿಸುವ ಮಟ್ಟಕ್ಕೆ ಅವರ ಕೋಪ ಮೀತಿಮೀರಿರುತ್ತದೆ. ವಿರೋದಿಸಿದ ನವಾಬ್‌ನನ್ನು ರೂಮಿಗೆ ಕೂಡಿಹಾಕಿ ಮರುಮದುವೆ ಮಾಡಲು ಮುಂದಾಗುತ್ತಾರೆ. ಈಕಡೆ ವಿಷಯ ತಿಳಿದ ಜಬೀನಾ ಪ್ರಪಂಚವೇ ತಲೆಮೇಲೆಬಿದ್ದಂತೆ ಮೂಕಳಾಗುತ್ತಾಳೆ, ಒಂದು ಕಡೆ ತನ್ನ ಗಂಡನ ಬಗ್ಗೆ ನಂಬಿಕೆಯನ್ನು ವ್ಯಕ್ತಪಡಿಸುತ್ತಾಳೆ. ನವಾಬ್ ಇಂತ ತನ್ನ ಕಠಿಣ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಪರಿತಪಿಸತ್ತಾನೆ. ತನ್ನ ಗೆಳೆಯರ ಮೂಲಕ ಮದುವೆ ದಿನವೇ ತಪ್ಪಿಸಿಕೊಂಡ ನವಾಬ್ ತನ್ನ ಪತ್ನಿಯನ್ನು ಸೇರುತ್ತಾನೆ. ತನ್ನ ದಾದನಿಂದ ಬಹುದೂರ ಹೋಗಿ ನೆಮ್ಮದಿಯ ಜೀವನ ಸಾಗಿಸುತ್ತಾರೆ. ಪ್ರಣಯ ಪಕ್ಷಿಗಳಂತೆ ಒಬ್ಬರನೊಬ್ಬರು ಬಿಟ್ಟು ಇರದಂತ ಆದರ್ಶ ವ್ಯಕ್ತಿಗಳಂತೆ ಜೀವನ ಸಾಗಿಸತ್ತಾರೆ.

***ಸಮಾನತೆ***

ಒಬ್ಬ ಗಂಡನಲ್ಲಿ ತಂದೆ–ತಾಯಿ, ಅಣ್ಣ–ತಮ್ಮ, ಬಂಧು–ಬಳಗದ ಪ್ರೀತಿ ಈ ಕಥೆಯಲ್ಲಿ ಕಾಣಬಹುದಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯವೆನೆಂದರೆ ತನ್ನ ಅಣ್ಣನಿಗೆ ಎದುರುತ್ತರ ಕೊಡದೆ ಮೂಕನಾದುದು ಒಂದು ಕಡೆ ತಪ್ಪೆನಿಸಿದರೂ ಕೂಡ ತನ್ನ ಹೆಂಡತಿಗೆ ಮೋಸ ಮಾಡದೆ ಬೇರೆ ಹೆಣ್ಣಿಗೆ ಆಸೆ ಪಡದೆ ಪತಿಧರ್ಮವನ್ನ ಪಾಲಿಸಿದ ನವಾಬ್ ಇಲ್ಲಿ ಪ್ರಮುಖ ಪಾತ್ರಧಾರಿಯಾಗಿ ಕಾಣುತ್ತಾನೆ. ಅವನ ಆ ಶ್ರೇಷ್ಠತೆಗೆ ಹಾಗೂ ಪ್ರಮಾಣಿಕತೆಯನ್ನು ಮೆಚ್ಚುವಂತಹದು. ಹಳೆ ಕಟ್ಟಳೆ, ಸಂಪ್ರದಾಯಗಳನ್ನು ಮುರಿದು ಗಂಡು, ಹೆಣ್ಣು ಸಮಾನತೆಯ ಎಡೆಗೆ ಸಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇಲ್ಲಿ ತಂದೆ–ತಾಯಿ, ಅಣ್ಣ–ತಮ್ಮ, ಬಂಧು–ಬಳಗದ ಪ್ರೀತಿಯನ್ನ ಗಂಡನಾದವನು ಒಬ್ಬನೇ ನಿರ್ವಹಿಸುವ ಗುಣಾತ್ಮಕತೆಯನ್ನು ಸಾ.ರಾ.ರವರು ಕಂಡಂತಹ ಪುರುಷ ವ್ಯಕ್ತಿತ್ವಗಳು.

***ಸಿದ್ಧಾಂತ ಮತ್ತು ಮೊದಲ ರಾತ್ರಿ***

ಇವೊತ್ತಿನ ಕೆಟ್ಟ ದಿನಗಳಲ್ಲಿ ವಧುವಿಗೆ ಒಳ್ಳೊಳ್ಳೆ ವರ ಸಿಗುವುದಾದರೂ ಎಲ್ಲಿ.. ಹುಡುಕುವುದಾದರೂ ಹೇಗೆ? ಹಿಂದಿನ ಕಾಲದಲ್ಲಿ ಒಂದು ಸಂಬಂಧ ಕೂಡಿ ಬರಬೇಕಾದಲ್ಲಿ ಏಳು ಜೊತೆ ಚಪ್ಪಲಿ ಸವಸಬೇಕಾಗಿತ್ತು. ವರದಕ್ಷಿಣೆಯ ಭರ ಭರಿಸಲಾಗದೆ ನೊಂದು, ನೋವನ್ನು ಅನಭವಿಸುವುದು ಒಂದು ಕಡೆಯಾದರೆ, ಅದಕೊಸ್ಕರ ಹೆಣ್ಣು ಮಕ್ಕಳೆ ಬೇಡ ಎನ್ನುವದು ಇನ್ನೊಂದು ಕಡೆಯಾಗಿತ್ತು. ಆದರೆ ಈಗ ವರದಕ್ಷಿಣೆ ಬೇಡ ಎನ್ನುವ ಒಳ್ಳೆ ಹುಡುಗ ಸಿಕ್ಕಿದರೂ, ಮುಂದೆ ಹೇಗೆ ಇರುತ್ತಾನೋ ಎಂಬ ಆತಂಕ, ಭಯ, ಆವರಿಸಿದೆ. ಅದರ ಒಂದು ನೋಟವೇ ಈ ಒಂದು ಕಥೆಯ ಮೂಲ. ಇಲ್ಲಿ ಮೊಹಿಸಿನ್ ಇಮ್ರಾನ್ ಒಬ್ಬ ಒರಟು ಹಾಗೂ ನೇರನುಡಿಯ ನಿಷ್ಠವಂತ ವ್ಯಕ್ತಿ, ಜೊತೆಗೆ ಸಮಾಜಿಕ

ಕಾಳಜಿ ಉಳ್ಳವನು ಮಹಿಳೆಯರ ಬಗ್ಗೆ ಗೌರವಭಾವನೆಯುಳ್ಳ ಉತ್ತಮ ನಡತೆಯ ವ್ಯಕ್ತಿಯಾಗಿದ್ದನು. ವರದಕ್ಷಿಣಿ ವರೋಪಚಾರಗಳ ಬಗ್ಗೆ ಧ್ವನಿ ಎತ್ತುವ ಪುರುಷನಾಗಿದ್ದನು. ರಾಯತ್ ಎಂಬ ಕನ್ಯೆಯನ್ನು ಮದುವೆ ಮಾಡಲು ಹರಸಾಹಸ ಪಡುತ್ತಿದ್ದ ಆಕೆಯ ತಂದೆ–ತಾಯಿಯರು (ಸಯ್ಯದ್ ಸಾಹೇಬ್ ಹಾಗೂ ರಶೀದಾ ಬಾನು) ಏಕೆಂದರೆ ರಾಯತ್ ಸ್ವಲ್ಪ ಕಪ್ಪನೆಯ, ವಯ್ಯಾರವಿಲ್ಲದ ಸಂಸ್ಕೃತ ಹುಡಿಗಿಯಾಗಿದ್ದಳು. ಇಮ್ರಾನ್ ಕೂಡ ವಿಶಿಷ್ಟ ಮತ್ತು ನೇರನುಡಿಯ ವ್ಯಕ್ತಿತ್ವದವನು. ರಾಯತ್ ಮದುವೆ ಮಾಡಲು ಹಲವು ವರ್ಷಗಳು ಹರಸಾಹಸ ತಂದೆ ತಾಯಿಗಳು ಕೊನೆಗೆ ಇಮ್ರಾನ್ ಜೊತೆಗೆ ಮಾಡಲು ನಿಶ್ಚಯ ಮಾಡುತ್ತಾರೆ. ಮುಸ್ಲಿಂ ಸಂಪ್ರದಾಯದಲ್ಲಿ, ವರದಕ್ಷಿಣೆ, ವರೋಪಚಾರಗಳನ್ನು ಕೊಡಲು ವಧುವನ ತಂದೆ–ತಾಯಿ ಶ್ರಮಪಡುತ್ತಿರುತ್ತಾರೆ. ಆದರೆ ಇಮ್ರಾನ್ ವರದಕ್ಷಿಣೆ, ವರೋಪಚಾರಗಳನ್ನು ಬೇಡವೆಂದು ಹಾಗೂ ಕೊಡಲೆಬೇಕಾದರೆ ತಾನೆ ನೋಡಿಕೊಳ್ಳುವುದಾಗಿ ರಾಯತ್‌ಗೆ ಹೇಳುತ್ತಾನೆ. ಅದನ್ನ ತಂದೆ–ತಾಯಿ ಹತ್ತಿರ ಹೇಳಲು ಭಯಪಡುತ್ತಾಳೆ. ಆದರೆ ಸ್ವಾಭಿಮಾನದ ತಂದೆ–ತಾಯಿ ಅದನ್ನ ಒಪ್ಪಿಕೊಳ್ಳುವುದಿಲ್ಲ ಏಕೆಂದರೆ ಮುಸಲ್ಮಾರನರ ಪದ್ಧತಿಗಳಿಗೆ ಭಯಪಡುವ ಹಾಗೂ ಗೌರವ ಕೊಡುವ ಸಂಪ್ರದಾಯದ ಮನೆಯವರು. ಈ ಕಡೆ ವರದಕ್ಷಿಣೆ, ವರೋಪಚಾರಗಳ ಬಗ್ಗೆ ಸಭೆ ಸಮಾರಂಭಗಳನ್ನ ಮಾಡಿದ ಇಮ್ರಾನ್ ಸ್ವಿಕರಿಸಲು ಒಪ್ಪದ ಸ್ವಾಭಿಮಾನಿ ಎಲ್ಲಿ ಬೇಡವೆಂದರೆ ವಧು ಕೊಡುವದಿಲ್ಲವೆಂದು ಒಪ್ಪಿಕೊಳ್ಳುತ್ತಾನೆ. ಆದರೆ ಮೊದಲ ರಾತ್ರಿಯಲ್ಲಿ ಅದನ್ನು ಹಿಂದುರಿಗಸುವ ಪ್ರಯತ್ನ ಮಾಡುತ್ತಾನೆ. ಅದನ್ನ ಸ್ವೀಕರಿಸದ ರಾಯತ್, ಬಿಡದ ಇಮ್ರಾನ್ ಹೀಗೆ ತುಂಬಾ ದಿನ ಮುಂದುವರೆಯತ್ತದೆ.

***ಭೇದ ಭಾವ***

ವರದಕ್ಷಿಣೆ ನಿಷೇದ, ಗೊಡ್ಡು ಸಂಪ್ರದಾಯದ ವಿಧಾಯ, ಗಂಡು–ಹೆಣ್ಣಿನ ಸಮಾನತೆ, ಪುರುಷತ್ವದ ಮಾನವೀಯತೆ ಎಂದು ಕಾಣುತ್ತದೆ. ಇಲ್ಲಿ ಹೆಣ್ಣು–ಗಂಡು ಎಂಬ ಭೇದಭಾವವಿಲ್ಲದೆ ಎಲ್ಲರು ಸಮಾನರು ಎಂಬ ತತ್ವವಿರುವ ಗುಣ ಇಮ್ರಾನ್ ನಲ್ಲಿ ಎಂದು ಕಾಣುವದು ವಿಶಿಷ್ಟವಾಗಿದೆ.

**ರಾಹಿಲ ಎಂಬ ಕನ್ಯೆಯ ಕತೆ**

ಪದವೀಧರೆಯಾಗಿದ್ದ ರಾಹಿಲಗೆ ಸ್ನಾತಕೋತ್ತರ ಶಿಕ್ಷಣ ಪಡೆಯುವ ತೀವ್ರ ಆಸೆಯಿದ್ದರೂ ಮನೆಯ ಪರಿಸ್ಥಿತಿಯಿಂದ ಸಾಧ್ಯವಾಗಿರಲಿಲ್ಲ. ರಿಟೈರ್ಡ್ ಆದ ತಂದೆ, ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿರುವ ತಾಯಿ; ದೊಡ್ಡಕ್ಕನ ಬಾಣಂತನ; ಎರಡನೆಯ ಅಕ್ಕನ ಮದುವೆಯ ಸಾಲ ತೀರಿಸುತ್ತಾ ಸಂಸಾರವನ್ನು ತೂಗಿಸುತ್ತಿರುವ ವೈಖರಿಯೇ ಆಶ್ಚರ್ಯವಾಗಿತ್ತು. ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿದ್ದ ರಾಹಿಲಾಳಿಗೆ ಮಹಿಪಾಲ್ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದ. ಶಾಲೆಯ ಜೀವನದಲ್ಲಿ ತೃಪ್ತಿಯನ್ನು ಕಾಣುತಿದ್ದಳು. ಹೆಣ್ಣನ್ನು ನೋಡಲು ಬರುವ ವರನ ಮನೆಯವರ ಖರ್ಚುನ್ನು ಭರಿಸಲು ಸಾಧ್ಯವಾಗದ ಪರಿಸ್ಥಿತಿ ಅವರದಾಗಿತ್ತು. ಹೀಗಿರುವಾಗ ಒಂದು ದಿನ ಆಕೆ ಪ್ರಾಣ ಸ್ನೇಹಿತೆಯಾದ ಹೇಮ ಹಾಗೂ ಆಕೆಯ ಸಹೋದರ ಪ್ರಸಾದ್‌ನ ಅನಿರೀಕ್ಷಿತ ಭೇಟಿಯಿಂದ ಗೆಳತನ ಮುಂದುವರೆಯುತ್ತದೆ. ಪ್ರಸಾದ್‌ಗೆ ರಾಹಿಲಳ ಸೌಂದರ್ಯ, ಸರಳತೆ ಹಾಗೂ ಅವಳ ಮುಗ್ಧತೆಗೆ ಮನಸೋತಿರುತ್ತಾನೆ. ಹಿಂದುವಾಗಿದ್ದರೂ, ಮುಸಲ್ಮಾಂನರ ಹುಡಗಿಯನ್ನು ಮದುವೆಯಾಗಲು ಯಾವುದೇ ತೊಂದರೆಗಳಿರಲಿಲ್ಲ. ಪ್ರಸಾದ್ ಒಬ್ಬ ಸುಂದರವಾದ, ಉನ್ನತ ಹುದ್ದೆಯ ವ್ಯಕ್ತಿ. ರಾಹಿಲಳಿಗೂ ಅವನೆಂದರೆ ಪ್ರೀತಿ.ಇಲ್ಲಿ ರಾಹಿಲಳ ಜೀವನವನ್ನು ಪ್ರತ್ಯಕ್ಷವಾಗಿ ತಿಳಿದಿದ್ದ ಅವನು ರಾಹಿಲಳನ್ನು ಮದುವೆಯಾಗವಂತೆ ಕೇಳುತ್ತಾನೆ. ಮತದ ಕೂಪದಲ್ಲಿ ಮಿಂದಿದ್ದ ಅವರ ಮನೆಯವರನ್ನು ಮತ್ತು ಸಮಾಜವನ್ನು ಎದುರಿಸಲು ಸಾಧ್ಯವಿಲ್ಲವೆಂದು ತಿಳಿದ ಅವಳು ಮದುವೆಯನ್ನು ನಿರಾಕರಿಸುತ್ತಾಳೆ. ಅಂತಸ್ತು, ಸೌಂದರ್ಯ, ಉನ್ನತ ಹುದ್ದೆಯಿರುವ ಜೊತೆಗೆ ಮನಸಾರೆ ಆಸೆಪಟ್ಟ

ವ್ಯಕ್ತಿಯನ್ನು ತನ್ನ ಧರ್ಮಕ್ಕಾಗಿ. ಸಮಾಜಕ್ಕಾಗಿ ನೀರಾಕರಿಸುವ ವ್ಯಕ್ತಿತ್ವ ಮನಕಲುಕುವಂತಿದೆ. ಬೇನೆಯ ಕೂಪದಲ್ಲಿ ತನ್ನ ಜೀವನವನ್ನು ನೂಕಿಕೋಳ್ಳುವ ಅವಳ ಆ ಗುಣ ಸಮಾಜವನ್ನು ಪ್ರಶ್ನಿಸುವಂತಿದೆ.

### *ಧರ್ಮದ ಸಮಾನತೆ*

ಧರ್ಮ ಸಹಿಷ್ಣತೆ, ಸಮಾನತೆಯ ಪ್ರೀತಿ. ಮನುಷ್ಯತ್ವದ ಗುಣ – ಇಲ್ಲಿ ಪ್ರಸಾದನದು ಧರ್ಮ ಸಹಿಷ್ಣತೆ, ಸಮಾನತೆ ಪ್ರೀತಿ. ಮನುಷ್ಯತ್ವದ ಗುಣ ಅವನದಾದರೆ. ಅದೇ ಧರ್ಮ ಅವಳ ಜೀವನಕ್ಕೆ ಮುಳ್ಳಾಗವುದು ಇನ್ನೊಂದು ಮುಖವಾಗಿದೆ. ಮನುಷ್ಯ ಬದಲಾದರೂ, ಧರ್ಮದ ಅಂದಕಾರ ಬದಲಾಗದೆ ಇರುವುದು ಧರ್ಮಾಂದಕ್ಕೆ ಕಾರಣವಾಗಿದೆ.

### *ಡೋ–ಡೋ ಹಕ್ಕಿ*

ಮಾರಿಷಸ್ ದ್ವೀಪದ ಹಚ್ಚಹಸಿರು ಮತ್ತು ದಟ್ಟ ಕಾಡಿನ ನಡುವೆ....ಆ ದಿನವೊಂದು ವಿಚಿತ್ರ ದ್ರಶ್ಯ!.. ಎತ್ತರವಾದ ಗುಡ್ಡಗಳನ್ನು ಹತ್ತಿ ಇಳಿದು, ಕಣಿವೆಗಳ ಇಳಿಜಾರನಲ್ಲಿ ಸಾಗುತ್ತ, ಝುರಿಯ ಬುಡದಲ್ಲಿ ತಂಪನೆಯ ನೀರಿನ್ನು ಗಂಟಲಿನಳಾದ ಪಸೆಗೆ ಹನಿಸುತ್ತಾ, ಆಯಾಸವನ್ನು, ದಣಿವನ್ನೂ ಲೆಕ್ಕಿಸದೆ ಆ ಕಾಡಿನ ಮೂಲೆಯಿಂದಲೂ ಸಹಸ್ರಾರು ಸಂಖ್ಯೆಯಲ್ಲಿ ಭಾರವಾದ ಹೆಜ್ಜೆಗಳನ್ನಿಡುತ್ತಾ ಡೋ–ಡೋ ಹಕ್ಕಿ ಓಡೋಡಿ ಬರುತ್ತಿದ್ದವು. ಎಲ್ಲ ಡೋ–ಡೋ ಹಕ್ಕಿಗಳು ಸೇರಿ ಒಂದು ಹೆಣ್ಣು ಡೋ–ಡೋ ಹಕ್ಕಿ ಮೇಲೆ ಪಂಚಾಯಿತಿಯನ್ನು ಮಾಡುವುದಾಗಿತ್ತು. ಏಕೆಂದರೆ ಒಕ್ಕಣ್ಣ ಎಂಬ ಡೋ–ಡೋ ಹಕ್ಕಿಯೊಂದಿಗೆ ತಮ್ಮ ಕುಲವನ್ನು ಸಂರಕ್ಷಿಸಿಕೋಳ್ಳುವ ಹೆಣ್ಣು ಡೋ–ಡೋ ಹಕ್ಕಿ ಮಾತನಾಡಿದ್ದು ಅಪರಾದವಾಗಿತ್ತು. ಅದೇನೆಂದರೆ–"ಈ ಮನುಷ್ಯರು ನಮ್ಮ ಕುಲಕ್ಕೆ ದೊಡ್ಡ ಆಪತ್ತು. ನಾವು ಭಾರವಾದ ದೇಹದ ದೆಸೆಯಿಂದ ವೇಗವಾಗಿ ಓಡಲು ಕೂಡ ನಮ್ಗೆ ಸಾಧ್ಯವಿಲ್ಲ ಹಾಗೂ ಹಾರಲು ಕೂಡ ನಮ್ಮ ರೆಕ್ಕೆಗಳಿಗೆ ಬಲವಲ್ಲ. ಆದರೆ ಅವರಿಂದ ನಾವು ಬಚಾವ್ ಆಗಬೇಕಾದರೆ ಇವೆರಡರಲ್ಲಿ ಯಾವುದನ್ನಾದರೂ ಮಾಡಲೇಬೇಕು. ನಾನು ಅನೇಕ ದಿನಗಳಿಂದ ಓಡುವ ಅಭ್ಯಾಸವನ್ನು ಮಾಡಿದೆ. ಆದರೆ ನಮ್ಮದು ಹಕ್ಕಿಯ ಕಾಲು ಹಾಗೂ ಉಷ್ಟ್ರಪಕ್ಷಿಯ ದೇಹ. ಹೀಗಾಗಿ ಓಡುವದಕ್ಕಿಂತ ಹಾರುವುದೇ ಮೇಲು ಅಂತ ಈಗ ಹಾರುವ ಅಭ್ಯಾಸವನ್ನು ಮಾಡುತ್ತಿದ್ದೇನೆ" ಅಂದಿತು. ಅದಕ್ಕೆ ಒಕ್ಕಣ್ಣ ಹೀಯಾಳಿಸುವ ರೀತಿ ಅದನ್ನ ಚುಡಾಯಸಿತು ಅದಕ್ಕೆ ಹೆಣ್ಣು ಡೋ–ಡೋ ಹಕ್ಕಿ ಈ ರೀತಿ ಹೇಳಿತು–"ಒಕ್ಕಣ್ಣ ನೀನು ನೋಡುತ್ತಿರು, ಈ ಮನುಷ್ಯರಿಗೆ ನಾವೇ ಮೊದಲ ಸುಲಭದ ಆಹಾರ. ನಮ್ಮ ಕುಲವನ್ನು ರಕ್ಷಿಸಿಕೊಳ್ಳಬೇಕಾದಲ್ಲಿ, ನಾವು ಹಾರಾಲೇಬೇಕು. ನಮ್ಮ ರೆಕ್ಕೆಗಳಿಗೆ ಶಕ್ತಿ ನೀಡಲೇಬೇಕು. ಇಲ್ಲವಾದಲ್ಲಿ ನಮ್ಮ ಕುಲವೇ ನಿರ್ನಾಮವಾಗುತ್ತದೆ ಎಂದಿತು. ಇದು ಆ ಡೋ–ಡೋ ಹಕ್ಕಿಗಳ ಪರಿವಾರಕ್ಕೆ ಅವಮಾನವಾಯಿತು. ಏಕೆಂದರೆ ಒಂದು ಹೆಣ್ಣು ಹಕ್ಕಿ ಕುಲದ ಬಗ್ಗೆ ಮಾತನಾಡಿದಿದು ತುಂಬಾ ಅಪರಾದದ ವಷಯವಾಗಿತ್ತು. ಅದನ್ನ ತಮ್ಮ ಪರಿವಾರದಿಂದ ಹೊರ ಹಾಕುವುದು ಅಥಾವ ಸಾಯಿಸುವುದು ಅವರ ಒಮ್ಮತದ ಮಾತಾಗಿತ್ತು.

### *ತಾರತಮ್ಯ*

ಇಲ್ಲಿ ಗಮನಿಸಬೇಕಾದದು ಹೆಣ್ಣು–ಗಂಡು ಎಂಬ ಬೇದಭಾವ. ತಮ್ಮ ಕುಲರಕ್ಷಿಸಿಕೊಳ್ಳಲು ಮುಂದಾದ ಆ ಹಕ್ಕಿಗೆ, ಹೆಣ್ಣು ಎಂಬ ಕಾರಣದಿಂದ ಅದರ ಜೀವಕ್ಕೆ ಆಪತ್ತು ನೀಡುವ ಈ ಗಂಡು ಸಮುದಾಯಕ್ಕೆ ದಿಕ್ಕಾರವಿರಲಿ. ಪಕ್ಷಿಗಳ ಸಮುದಾಯದಲ್ಲೇ ಈಗಾದರೆ ಇನ್ನೂ ಜಾಗತಿಕ ಸಮಾಜದಲ್ಲಿ, ಅಧುನಿಕವಾಗಿ, ಜಾಗತಿಕವಾಗಿ ಇಷ್ಟು ಮುಂದುವರೆದಿದ್ದರೂ ಇಂದಿಗೂ ಈ ಬೇದಭಾವವಿರುವುದು ಅಕ್ಷರಶಃ ಒಂದು ಅಕ್ಷಮ್ಯ ಅಪರಾದವಾಗಿದೆ. ಪುರುಷ ಸಮಾಜದಲ್ಲಿ ಎಷ್ಟೊ ಮಂದಿಗೆ ಗಂಡು–ಹೆಣ್ಣಿನ ಬಗ್ಗೆ ತಿಳುವಳಿಕೆ ಮೂಡಿದರೂ ಇನ್ನೂ ಕೆಲವು ಮಂದಿಯಲ್ಲಿ

ಜೀವಂತಿಕೆಯಾಗಿದೆ.ಅದನ್ನು ಮುರಿದು ಮುಂದುವರೆಯುವ ಸಮಾಜ ನಮ್ಮದಾಗಬೇಕಿದೆ. ಹೀಗೆ ಸಾ.ರಾ. ಅವರ ಕಥೆಗಳಲ್ಲಿ ವಿಭಿನ್ನ ರೀತಿಯ ಪರುಷ ಪಾತ್ರಗಳನ್ನು ಕಾಣಬಹುದಾಗಿದೆ.

ಹೃದಯದತೀರ್ಪು, ಆಸ್ಪತ್ರೆಯ ಒಂದು ದಿನ, ಪರಕೀಯ ಮುಂತಾದ ಕಥೆಗಳು ಪುರುಷ ಪಾತ್ರಗಳ ನಿರ್ವಚನದ ಬಗ್ಗೆ ಮಾಹಿತಿಗಳಾಗುತ್ತವೆ. "ನಾನು ಬದಲಾಗಬೇಕು" ಅಂತ ಅನಿಸಿದ ದಿನ ಆತನ ಹೊಸ ಅಸ್ತಿತ್ವ ಶುರುವಾಗುತ್ತದೆ. ಆತನ ಅಸ್ತಿತ್ವ ಈಗ ಪ್ರಶ್ನೆಯಲ್ಲ. ಪ್ರಶ್ನೆ ಇರುವುದು ಯಾವ ರೀತಿಯ ಪುರುಷನಾಗಿ ಇರಬೇಕು ಎನ್ನುವುದು ಮುಖ್ಯವಾಗುತ್ತದೆ. ಹೀಗೆ ಸಾ.ರಾ. ರವರ ಕಥೆಗಳಲ್ಲಿ ವಿಭಿನ್ನ ರೀತಿಯಲ್ಲಿ ಪರುಷ ಪಾತ್ರಗಳನ್ನು ಕಾಣಬಹುದಾಗಿದೆ. ಉಭಯಲಿಂಗಿಗಳ ಜೋತೆಗೆ ಹೆಣ್ಣಿನಲ್ಲಿ ಗಂಡು.ಗಂಡಿನಲ್ಲಿ ಹೆಣ್ಣಾಗಿ ತಮ್ಮ ಪಾತ್ರವನ್ನು ಕಂಡುಕೊಳ್ಳುತ್ತಿದ್ದಾರೆ ಮತ್ತು ಇನ್ನೂ ಕೆಲವು ಮಂದಿ ತಮ್ಮನ್ನು ತಿದ್ದಿಕೊಳ್ಳುವ ಪರಿಗೆ ಸಾಗುತ್ತಿರುವದನ್ನು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥ**


- ಬಾನು ಮುಷ್ತಕ್. (2025). *ಹಸೀನಾ ಮತ್ತು ಇತರ ಕಥೆಗಳು.* ಅಭಿರುಚಿ ಪ್ರಕಾಶನ